ಶ್ರೀ ಬಿ. ಭಾನ್ಕರ ಶೆಟ್ಟಿ — ಪಂಚಾಯತಿಯವರಾಗಲೀ ಅಥವಾ ಪಿಡಬ್ಲ್ಯೂಡಿ ಯವರಾಗಲೀ ಯಾವ ಒಂದು ವ್ಯವಸ್ಥೆಯನ್ನು ಮಾಡಿಲ್ಲ. ನಾನು ಈಗತಾನೇ ಊರಿನಿಂದ ಬಂದಿದ್ದೇನೆ. ನುಮಾರು 500 ಜನ ವಿೂನುಗಾರರು, ಮತ್ತು ಸ್ಕೂಲಿಗೆ ಹೋಗತಕ್ಕ ಮಕ್ಕಳು ಜಾಸ್ತಿಯಿರುವುದ ರಿಂದ ತಾವು ಒಂದು ವ್ಯವಸ್ಥೆಯನ್ನು ತಾತ್ಕಾಲಿಕವಾಗಿಯಾದರೂ ಮಾಡುವ ಹಾಗೆ ನೂಚನೆ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. —ಅವನ್ನು ಕೀಘ್ರವಾಗಿ ಮಾಡುತ್ತೇನೆ.

ಶ್ರೀ ಪಿ. ಡಿ ಭಂಗೇರ.—ತಾವು ಇದನ್ನು ಪರಿಸೀಲಿಸುವುದರೊಳಗಾಗಿ ಈ ಸೀಶನ್ ಮುಗಿ ಯುತ್ತದೆ ಮಾನ್ಯ ಭಾನ್ಕರ ಶೆಟ್ಟಿಯವರು ಹೇಳಿದ ಹಾಗೆ ತಾವು ಬೇಗ ಕ್ರಮ ತಗೆದುಕೊಂಡು ಈ ಸೇತುವೆಯನ್ನಾದರೂ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

(No Answer)

(*ii*) *re : Scarcity of drinking water in Basavakalyan Taluk*

SRI BAPURAO ANANDARAO (Basavakalyan).—Madam Speaker, I beg to call the attention to the Minister for Municipal Administration and Political Pensions to the scarcity of drinking water in Basavakalyan Town.

SRI D. K. NAIKAR (Minister for Municipal Administration and Politica (Pension).-Originally an estimate amounting to Rs. 11.79 lakhs for water supply scheme to Basavakalyan town was administratively approved in Government order No PIM 30/CDS 62 dated 4th March 1966 during the 8th Centenary Celebrations of Lord Basaveswar. The scheme was commis-ioned in 1967 with four existing open dug wells for want of urgency. Service reservoir of 1.00 lakh gallons capacity and distribution system were completed then. The yield from the open wells went on decreasing and had to be abondoned ultimately. Thereafter the scheme was supplemented with four borewells and one well sunk in Tipranth tank bed in 1973. A common pump, one elevated service reservoir of 30 000 gallons capacity and gravity main connecting this reservoir to the existing reservoir were also completed.

2,60,000 gallons of water is being supplied to the town for a population of about 26,000. In addition, one bore well in Mangwada is harnessed with 4.5 HP pump yielding 4,000 gallons per hour and connected to the distribution system and three stand Posts in the Harij nawda. One open well is also being utilised to pump 3,000 gallons per hour to distribution system. As such there is no scarcity of water at present in the town.

The scheme with the above proposals and as per actuals amounting to Rs. 13 41 lakhs has been administratively approved in G. O. No. HMA 194 MNS 74 dated 13th February 1975 and Techni-

cally sanctioned by the Chief Engineer, Minor Irrigation and Public Health Engineering in No. PHE/HD/TS/74-75 dated 25th September 1975.

The augmentation of water supply scheme with Balkunda tank as source for the supply of water at the rate of 20 GPCD to the prospective population of 40,000 people is under investigation.

SRI BAPURAO ANANDARAO.—Madam Speaker, as the tank work has been completed and the population has increased, will the Government assure us to supply 20 gallons of water to the town? when the present scheme will be expedited and when it will be given effect to?

SRI D. K. NAIKAR —Madam Speaker, I have mentioned in my statement that the matter is under investigation. After the proposals are received from the Board, the Government will examine the feasibility of the Scheme.

Taking up Some Urgent notices from Members

ಶ್ರೀ ಬಿ. ಎ. ಕಕ್ಕಿರಾಯ.—ಅಧ್ಯಕ್ಷರೆ?, ನಾನು ರೂಲ್ಸ್ 312ರ ಪ್ರಕಾರ ಮಂಗಳೂರು ಪಾಲಿಟೆಕ್ನಿಕ್‌ನಲ್ಲಿ ಆಡ್ಮಿಷನ್ ಮಾಡಿಕೊಳ್ಳುತ್ತಿರುವ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಅದು ಇನ್ನೂ ಬಂದಿಲ್ಲಾ.

ಅಧ್ಯಕ್ಷರು.— ತಾವು ನಿನ್ನೆ ತಾನೇ ಕೊಟ್ಟಿದ್ದೀರಿ.

ಶ್ರೀ ಬಿ. ಎ. ಕಕ್ಕಿರಾಯ.— ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಮತ್ತು ತುರ್ತಾದ ಪ್ರಶ್ನೆ.

ಅಧ್ಯಕ್ಷರು.—ತಾವು ರೂಲ್ಸ್ 312ರ ಕೆಳಗೆ ಕೊಟ್ಟಿರುವ ನೋಟೀಸ್ ಈಗ್ಲೊತ್ತೇ ಬರತಕ್ಕಂಥಾ ಅವಶ್ಯಕತೆ ಇಲ್ಲ. ಈಗ್ಲೊತ್ತು ಎರಡು ಮುಖ್ಯವಾದ ಡಿಮ್ಯಾಂಡ್‌ಗಳು ಇವೆ. ಅವು ಮುಗಿಯಲಿ.

ಶ್ರೀ ಯು. ಟಿ. ಫರೀದ್ — ಅಧ್ಯಕ್ಷರೇ, ಇದು ಬಹಳ ತುರ್ತಾದ ವಿಷಯ. ಏತಕ್ಕೆಂದರೆ ಈಗ್ಲೊತ್ತೊ ನಾಳೆಯೋ ಮಂಗಳೂರು ಪಾಲಿಟೆಕ್ನಿಕ್‌ನಲ್ಲಿ ಆಡ್ಮಿಷನ್ ಲಿಸ್ಟ್‌ನ್ನು ಪಬ್ಲಿಷ್ ಮಾಡುತ್ತಾರೆ. ಅವರು ಮಾಡಿರೋದನ್ನು ನೋಡಿದರೆ ಆಲ್ಲಿ ಮೆರಿಟ್‌ನಲ್ಲಿರುವಂಥಾ ಕ್ಯಾಂಡಿಡೇಟ್ಸ್‌ಗೆ ಸೀಟುಗಳನ್ನೇ ಕೊಟ್ಟಿಲ್ಲ, ಬೇರೆ ಬೇರೆ ಯಾರ್ಯಾರಿಗೋ ಸೀಟುಗಳನ್ನು ಕೊಟ್ಟಿದ್ದಾರೆ. ಅದು ದರಿಂದ ಇದು ಬಹಳ ತುರ್ತಾಗಿದೆ.

ಅಧ್ಯಕ್ಷರು — ನಿನ್ನೆ ನೋಟೀಸ್ ತಾನೇ ಬಂದಿದೆ ಅದನ್ನು ನಾನು ಸರ್ಕಾರಕ್ಕೆ ಕಳುಹಿಸಿದ್ದೇನೆ ಆದಕ್ಕೆ ಸ್ವಲ್ಪ ಸಮಯ ಬೇಡವೆ?

ಶ್ರೀ ಯು. ಟಿ. ಫರೀದ್.— ಹಾಗಾದರೆ ಇದಕ್ಕೆ ಉತ್ತರ ಬರುವುದರೊಳಗಾದರೂ ಕೂಡ ಆಲ್ಲ ಏನು ಆಡ್ಮಿಷನ್ ಲಿಸ್ಟ್ ಮಾಡಿಕೊಂಡಿರುತ್ತಾರೋ ಅದನ್ನು ತಡೆಹಿಡಿಯುವುದಕ್ಕಾದರೂ ಹೇಳಲಿ.

ಅಧ್ಯಕ್ಷರು — ಈಗ್ಲೊತ್ತು ಈಗ ಈ ಸದನದಲ್ಲಿ ಇದಕ್ಕೆ ಸಂಬಂಧಪಟ್ಟವರು ಯಾರೂ ಇಲ್ಲ. ಎಜುಕೇಷನ್ ಮಂತ್ರಿಗಳು ಇಲ್ಲ.

ಶ್ರೀ ಯು. ಟಿ. ಫರೀದ್.— ಅವರು ಈ ಲಿಸ್ಟ್‌ನ್ನು ಪಬ್ಲಿಕೇಷನ್ ಮಾಡಿಬಿಟ್ಟರೆ ಅಮೇಲೆ ಬಹಳ ಕಷ್ಟವಾಗುತ್ತದೆ. ಆದುವರೆಗಾದರೂ ಕೂಡ ಅವರಿಗೆ ಒಂದು ಪ್ರೊಟೆಕ್ಷನ್ ಕೊಡಬೇಕಾಗುತ್ತದೆ, ಆದುದರಿಂದ ಇದಕ್ಕೆ ಉತ್ತರ ಬರುವವರೆಗಾದರೂ ಆ ಲಿಸ್ಟ್‌ನ್ನು ತಡೆಹಿಡಿಯುವುದ ಕ್ಕಾದರೂ ಹೇಳಲಿ,